ಕುನ್ನಿಗಳಿಗೆ ಹಾರ್ಲಿಕ್ಸ್ ಕೊಂಡುತಂದರು. ಅವರು ಇಲ್ಲಿದ್ದು ಇದೇ ತರಹದ ಉಪಚಾರವನ್ನು ಮಾಡತೊಡಗಿದರೆ, ನಮ್ಮ ಕಾಲನಿಯಲ್ಲಿ ನಾಯಿಗಳಿಗೆ ಬೇಕಾದ ಹಾಲು, ಮಾಂಸ, ಬ್ರೆಡ್ಡು ಹೊತ್ತ ವ್ಯಾನುಗಳು ಓಡಾಡುವ; ನಾಯೌಷಧಿ, ಬಾಚಣಿಗೆ, ಬೆಲ್ಟು, ಸರಪಳಿ, ಬಿಸ್ಕತ್ತು, ಪೌಡರು ಮಾರುವುದಕ್ಕೆಂದೇ ಮಾಲ್ ಸ್ಥಾಪನೆಯಾಗುವ; ಶ್ವಾನತರಬೇತಿ ಕೇಂದ್ರ ಹಾಗೂ ವೈದ್ಯಶಾಲೆಗಳು ಸ್ಥಾಪನೆಗೊಳ್ಳುವ ದಿನಗಳು ದೂರವಿಲ್ಲ ಅನಿಸಿತು. ಆದರೆ, ಅಂತಹ ದಿನಗಳು ಬರಲಿಲ್ಲ. ಪ್ರೊಫೆಸರ್ ಮರಳಿ ದೆಹಲಿಯ ಮಾತೃಸಂಸ್ಥೆಗೆ ಹೋಗಬೇಕಾಯಿತು. ಆಗವರು ಬುರ್ರಿಯನ್ನೂ ಜತೆಗೊಯ್ಯಲು ನಿರ್ಧರಿಸಿದರು. ಆಪರೇಶನ್ ಡೆಲ್ಲಿ ಶುರುವಾಯಿತು. ಬಡಗಿಗಳಿಂದ ಮರದ ಒಂದು ಪಂಜರ ಮಾಡಿಸಲಾಯಿತು; ಅದರಲ್ಲಿ ಬುರ್ರಿಗೆ ಎರಡು ದಿನಕ್ಕೆ ಬೇಕಾದ ತಿಂಡಿತೀರ್ಥ ಇಟ್ಟು, ರೈಲಿನ ಲಗೇಜು ವ್ಯಾಗಿನಿನಲ್ಲಿ ಇಡಲಾಯಿತು. ಆಕೆ ಬೆಡಗಿನಿಂದ ತವರನ್ನು ಬಿಟ್ಟು ಮೊಗಲರ ರಾಜಧಾನಿಗೆ ಹೋದಳು.

ಆದರೆ ಬುರ್ರಿಗೆ ದೆಹಲಿಯಂತಹ ಪರಸ್ಥಳದಲ್ಲಿ ಹತ್ತನೇ ಮಹಡಿಯ ಫ್ಲಾಟಿನಲ್ಲಿ ಇರುವುದು ಕಷ್ಟವಾಗಿರಬೇಕು. ನಾನೆಲ್ಲಿ ಬಂದೆ ಎಂದು ಚಡಪಡಿಕೆ ಆರಂಭವಾಗಿರಬೇಕು. ಪ್ರೊಫೆಸರ್ ಮನೆಯಲ್ಲಿಲ್ಲದ ಹೊತ್ತಲ್ಲಿ ಆಕೆ ಧಣಿಯನ್ನು ಹುಡುಕೊಂಡೊ ಹೊಸಪೇಟೆಗೆ ಹೋಗುತ್ತೇನೆಂದೊ ದೆಹಲಿ ರಸ್ತೆಗಳಿಗೆ ಧುಮುಕಿದಳು. ಪ್ರೊಫೆಸರ್ ಕಂಗೆಟ್ಟು ಟ್ಯಾಕ್ಸಿ ಮಾಡಿಕೊಂಡು ಹುಡುಕಿದರು. ಆಕೆಯ ಫೋಟೊ ಹಾಕಿ ಜಾಹೀರಾತು ಕೊಟ್ಟರು. ಎಲ್ಲವೂ ಬಣವೆಯಲ್ಲಿ ಸೂಜಿ ಹುಡುಕಿದಂತಾಯಿತು. ಬುರ್ರಿ ಯಾವ ಟೈರಿಗೆ ಸಿಕ್ಕಿದಳೊ, ಕಾರ್ಪೊರೇಶನ್ನಿನವರ ಬಲೆಗೆ ಬಿದ್ದಳೊ, ಬೀದಿಯ ನಾಯಿಗಳ ಜತೆಗೂಡಿ ಹೊಸ ಸಂಸಾರ ಹೂಡಿದಳೊ ತಿಳಿಯದಾಯಿತು. ನಮಗಿರುವ ಜಾತಿ, ಧರ್ಮ, ಭಾಷೆಗಳ ಕಟ್ಟುಪಾಡುಗಳು ನಾಯಿಗಳಿಲ್ಲವಾದ ಕಾರಣ, ಕೊನೆಯ ಸಾಧ್ಯತೆಯೇ ಹೆಚ್ಚು ಎಂದು ನಾನು ಸಮಾಧಾನ ಮಾಡಿಕೊಂಡೆ. ಆಕೆಯ ಕಣ್ಮರೆ ನಿಗೂಢವಾಗಿಯೆ ಉಳಿಯಿತು. ಪ್ರೊಫೆಸರ್ ಫೋನಿನಲ್ಲಿ ಅಕ್ಷರಶಃ ಅತ್ತರು.

ಈ ಪ್ರಕರಣದಿಂದ ನಾಯಿ ಸಾಕಬಾರದು ಎಂಬ ನಮ್ಮ ಭೀಷ್ಮಪ್ರತಿಜ್ಞೆ ಮತ್ತಷ್ಟು ಗಟ್ಟಿಯಾಯಿತು. ಮಿಟ್ಟುವನ್ನು ಹೊರಗಟ್ಟಿದ ಪರಿತಾಪವೂ ಕಡಿಮೆಯಾಯಿತು. ಆದರೆ ನಾಯಿ ಸಾಕಿದ ಅನುಭವ ಮಾತ್ರ ಸ್ಮೃತಿಕೋಶದೊಳಗೆ ಕೂತು ಲೀಲೆಯನ್ನು ತೋರತೊಡಗಿತು. ಇದರಿಂದ ಈಗಲೂ, ಚಂದದ ನಾಯಿ ಕಂಡರೆ ಸಣ್ಣಗೆ ಸಿಳ್ಳುಹಾಕಿ ದೋಸ್ತಿ ಮಾಡಬೇಕು, ಅದರ ತಲೆ ಸವರಬೇಕು, ಅದು ಮೈಮೇಲೆ ಎಗರಿ ನಮ್ಮೆದೆಗೆ ಕಾಲುಕೊಟ್ಟು

**ಹತ್ತು ವರ್ಷಗಳ ಬಳಿಕ ಪ್ರೊ. ದತ್ತ, ದೆಹಲಿಯಿಂದ ಹಂಪಿಗೆ ಯಾತಕ್ಕೊ ಬಂದವರು, ತಮ್ಮ ಹೊಸ ಪುಸ್ತಕ ಕೈಲಿಟ್ಟರು. ಕರ್ನಾಟಕ ಸಂಸ್ಕೃತಿ ಮೇಲಿನ ಲೇಖನಗಳ ಸಂಕಲನವದು. ಪುಟ ತೆಗೆಯುತ್ತ ಹೋದೆ. ಪುಸ್ತಕ ಬುರ್ರಿಗೆ ಅರ್ಪಣೆಯಾಗಿತ್ತು. ತನ್ನ ಒಣಗಿದ ಬಾಳಿಗೆ ಅರ್ಥಕೊಟ್ಟು ಕಣ್ಮರೆಯಾದ ಬುರ್ರಿಗೆ ಎಂದು ಒಕ್ಕಣೆಯಿತ್ತು!**